# ಅಪೂರ್ವ

## ಚಿಕ್ಕಮಗಳೂರ ಚಿಕ್ಕಮಲ್ಲಿಗೆ

**ಪಾತ್ರಗಳಲ್ಲಿನ ಭಿನ್ನತೆಯನ್ನೇ ನಟನೆಗೆ ಒರೆಗಲ್ಲಾಗಿ ಮಾಡಿಕೊಳ್ಳಬೇಕೆನ್ನುವ ನಟಿ ಅಪೂರ್ವ, ಅಂಥ ಪ್ರಯೋಗಮುಖಿ ಪಾತ್ರಗಳನ್ನು ನೀಡುವ ಕಥೆಗಳಿಗೆ ತಾವು ಮುಕ್ತವಾಗಿರುವುದಾಗಿ ಹೇಳುತ್ತಾರೆ...**

■ ಎಸ್ಸೆನ್

‘ಅಪೂರ್ವ’, ‘ವಿಕ್ಟರಿ 2’, ‘ಕೃಷ್ಣ ಟಾಕೀಸ್’, ‘ಪುರುಷೋತ್ತಮ’ ಸಿನಿಮಾಗಳಲ್ಲಿ ನಟಿಸಿರುವ ಚಿಕ್ಕಮಗಳೂರ ಚೆಲುವೆ ಅಪೂರ್ವ ಅವರ ಮುಂದೆ ಇನ್ನಷ್ಟು ಸಿನಿಮಾಗಳು ಸರತಿ ಸಾಲಿನಲ್ಲಿವೆ. ಕನ್ನಡ ಸಿನಿಮಾ ರಂಗದಲ್ಲಿ ತಮ್ಮ ಗುರುತು ಮೂಡಿಸುವ ಉಮೇದಿನಲ್ಲಿರುವ ಅವರು, ಹೊಸ ಹೊಸ ಪಾತ್ರಗಳ ಪೋಷಾಕು ಧರಿಸುವ ಜೊತೆಗೆ ಸಿನಿಮಾ ನಿರ್ದೇಶನದ ಗುರಿಯನ್ನೂ ತಮ್ಮೊಡನಿಟ್ಟುಕೊಂಡಿದ್ದಾರೆ.

ಅಪೂರ್ವ ಚಿಕ್ಕಮಗಳೂರಿನ ಕಡೂರಿನವರು. ಹತ್ತನೇ ತರಗತಿಯನ್ನು ಕಡೂರಿನಲ್ಲಿಯೇ ಮುಗಿಸಿ ಪಿಯುಸಿಗೆ ಮೈಸೂರು ಸೇರಿದ ಅವರಿಗೆ ಅಲ್ಲಿಯೇ ಸಿನಿಮಾ ಲೋಕ ತೆರೆದುಕೊಂಡಿದ್ದು. ಕಾಲೇಜಿನಲ್ಲಿದ್ದಾಗಲೇ, ನಟ ರವಿಚಂದ್ರನ್ ಅವರ ‘ಅಪೂರ್ವ’ ಸಿನಿಮಾದಲ್ಲಿ ನಟಿಸುವ ಅವಕಾಶ ಅಚಾನಕ್ಕಾಗಿ ದೊರೆಯುವ ಮೂಲಕ ಅವರಲ್ಲಿ ಸಿನಿಮಾ ಬಗೆಗಿನ ಹೊಸ ಹೊಸ ಕನಸುಗಳು ಮೊಳೆತಿದ್ದವು.

‘ಮೈಸೂರಿನಲ್ಲಿ ಕಾಲೇಜು ಓದುತ್ತಿರುವಾಗ ಕಾಲೇಜಿನ ಮ್ಯಾಗಜೀನ್‌ಗೆಂದು ಫೋಟೊಶೂಟ್ ಮಾಡಿಸಲಾಗಿತ್ತು. ಅದರಲ್ಲಿ ಹಲವರ ಫೋಟೊಗಳ ಜೊತೆಗೆ ನನ್ನ ಫೋಟೊವನ್ನೂ ರವಿಚಂದ್ರನ್ ಸರ್ ಅವರಿಗೆ ಕಳಿಸಲಾಗಿತ್ತು. ಅದೇ ಸಮಯದಲ್ಲಿ, ಅವರು ‘ಅಪೂರ್ವ’ ಸಿನಿಮಾಗೆ ಹೊಸ ಮುಖದ ಹುಡುಕಾಟದಲ್ಲಿದ್ದರು. ನನ್ನ ಫೋಟೊ ನೋಡಿದ ಅವರು, ಆಡಿಷನ್‌ಗೆ ಕರೆದರು. ನಾನು ಸಿನಿಮಾ ಕ್ಷೇತ್ರಕ್ಕೆ ಬರುವ ಊಹೆ ಕೂಡ ಮಾಡಿದವಳಲ್ಲ. ರವಿಚಂದ್ರನ್ ಅವರನ್ನು ನೋಡಿದ ಹಾಗಾದರೂ ಆಗುತ್ತೆ ಎಂದು ಸುಮ್ಮನೆ ಆಡಿಷನ್‌ಗೆ ಹೋಗಿದ್ದೆ’ ಎಂದು ನಗುತ್ತಾರೆ ಅಪೂರ್ವ.

ಸಿನಿಮಾ ಬಗ್ಗೆ ಗೊತ್ತು ಗುರಿ ಇಲ್ಲದ ಅಪೂರ್ವ, ಸಿನಿಮಾಗೆ ಬರುವ ಆಲೋಚನೆಯನ್ನು ಕೂಡ ಮಾಡಿದವರಲ್ಲವಂತೆ. ‘ನನಗೆ ಸಿನಿಮಾ ಕ್ಷೇತ್ರದ ಯಾವ ಹಿನ್ನೆಲೆಯೂ ಇರಲಿಲ್ಲ. ಸಿನಿಮಾ ಕುರಿತು ಏನೆಂದರೇನೂ ಗೊತ್ತಿರಲಿಲ್ಲ. ಅದೃಷ್ಟ ಎಂಬಂತೆ ಸಿನಿಮಾಗೆ ಆಯ್ಕೆ ಆಗಿದ್ದೆ. ನನ್ನ ತಾತ, ಅಜ್ಜಿ ಹಳ್ಳಿಯಲ್ಲಿ ನಾಟಕ ಮಾಡುತ್ತಿದ್ದರಂತೆ. ಆ ಕಲೆಯೇ ನನ್ನಲ್ಲೂ ಈ ರೀತಿ ಬಂದಿದೆ ಎನಿಸುತ್ತದೆ. ಶಾಲಾ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದಾ ಮುಂದಿರುತ್ತಿದ್ದ ನನ್ನನ್ನು ಗೆಳೆಯರು ‘ಹೀರೋಯಿನ್’ ಎಂದು ಸುಮ್ಮನೆ ರೇಗಿಸುತ್ತಿದ್ದರು. ಒಂದು ಮಾತಿದೆಯಲ್ಲ, ಮಾತಾಡುತ್ತಾ ಮಾತಾಡುತ್ತಾ ಅದೇ ನಿಜವಾಗಿಬಿಡುತ್ತದೆ ಎಂದು, ಹಾಗೇ ನನ್ನನ್ನು ಹಾಗೇ ಕರೆದು ಕರೆದು ಅದೇ ಆಗಿದ್ದೇನೆ’ ಎನ್ನುತ್ತಾರೆ ಅಪೂರ್ವ.

‘ಅಪೂರ್ವ’ ಸಿನಿಮಾ ಆಡಿಷನ್ ಕೊಟ್ಟ ನಂತರ, ಇದು ಆಗುವ ಕೆಲಸವಲ್ಲ ಎಂದು ಸುಮ್ಮನಾಗಿದ್ದರು. ಆದರೆ ಮತ್ತೆ ಆರು ತಿಂಗಳ ನಂತರ ಕರೆ ಬಂದಿತ್ತು. ರವಿಚಂದ್ರನ್ ಅವರೇ ಇನ್ನೊಮ್ಮೆ ಆಡಿಷನ್ ತೆಗೆದುಕೊಂಡು, ಸಿನಿಮಾಗೆ ಆಯ್ಕೆ ಮಾಡಿದ್ದರು. ‘ನನ್ನದೇ ಹೆಸರಿನ ಸಿನಿಮಾದಲ್ಲಿ, ಅದೂ ಅಷ್ಟು ದೊಡ್ಡ ನಟನೊಂದಿಗೆ ನನ್ನ ಮೊದಲ ಸಿನಿಮಾ ಮಾಡಿದ್ದು ಎಂದಿಗೂ ನೆನಪಿನಲ್ಲುಳಿಯುವ ಸಂಗತಿ’ ಎಂದು ನೆನಪಿಸಿಕೊಳ್ಳುತ್ತಾರೆ.

ಮೊದಲ ಸಿನಿಮಾ ನಂತರ ಗ್ಯಾಪ್ ತೆಗೆದುಕೊಂಡು ಪದವಿ ಶಿಕ್ಷಣ ಮುಗಿಸಿದ ಅಪೂರ್ವಗೆ ನಂತರ ಒಂದೊಂದಾಗಿ ಅವಕಾಶಗಳೂ ಒದಗಿಬಂದವು. ‘ವಿಕ್ಟರಿ 2’, ‘ಕೃಷ್ಣ ಟಾಕೀಸ್’, ‘ಪುರುಷೋತ್ತಮ’ ಸಿನಿಮಾಗಳು ನಟನೆಗೆ ಅವಶ್ಯಕವಿರುವ ಮೂಲ ತರಬೇತಿ ತರಗತಿಗಳಂತಾದವು. ಸಿನಿಮಾಗೆ ಪೂರಕವಾಗಿರಬೇಕೆಂದು ನೃತ್ಯ ತರಗತಿಗೂ ಸೇರಿಕೊಂಡರು. ನಟನೆಯ ಜೊತೆಜೊತೆಗೆ ನಿರ್ದೇಶನದೆಡೆಗೂ ಸಣ್ಣದೊಂದು ಆಸಕ್ತಿ ಅವರೊಳಗೆ ಚಿಗುರಿತ್ತು.

‘ರವಿ ಸರ್ ಜೊತೆ ಕೆಲಸ ಮಾಡುವುದು ಹೊಸ ಕಲಾವಿದರಿಗೆ ಸ್ಪೆಷಲ್ ಕ್ಲಾಸ್‌ನಂತೆ. ಅವರಿಂದ ಕಲಿಯುವುದು ತುಂಬಾ ಇದೆ. ಏನೂ ಗೊತ್ತಿಲ್ಲದೆ ಬಂದ ನನಗೆ ಈ ಕ್ಷೇತ್ರದಲ್ಲಿ ಒಂದಿಷ್ಟು ತಿಳಿವಳಿಕೆ ಬಂದಿದ್ದು ಅವರೊಂದಿಗಿನ ನಟನೆಯಲ್ಲಿ. ಸಿನಿಮಾ ಶೂಟಿಂಗ್ ಸಮಯದಲ್ಲಿ ಅವರು ನನ್ನನ್ನು ಸುಮ್ಮನೆ ಕೂರಿಸುತ್ತಿರಲಿಲ್ಲ. ಬರೆಯಲು ಕೊಡುತ್ತಿದ್ದರು,



